## 14 ವರ್ಷದೊಳಗಿನ ಶಾಲೆಯಿಂದ ಹೊರಗಡೆ ಇರುವ ಎಲ್ಲಾ ಮಕ್ಕಳು ಬಾಲಕಾರ್ಮಿಕರು

# "ಮಕ್ಕಳ ಹಕ್ಕುಗಳ" ಅನುಷ್ಠಾನ ಹಾಗೂ "ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ"ಗೆ ನೀವೇನು ಮಾಡಬಹುದು....?

**ಮಕ್ಕಳೇ ...**

- ✦ ನಿಮ್ಮ ಎಲ್ಲಾ ಹಕ್ಕುಗಳನ್ನು ಚೆನ್ನಾಗಿ, ಗುಣಾತ್ಮಕವಾಗಿ ಅರ್ಥೈಸಿಕೊಳ್ಳಿ ಮತ್ತು ಅದನ್ನು ಅನುಭವಿಸಿ.
- ✦ 10ನೇ ತರಗತಿ ತನಕ ಯಾವುದೇ ಕಾರಣಕ್ಕೂ ಶಾಲೆ ಬಿಡಬೇಡಿ.
- ✦ ಯಾರ ಒತ್ತಾಯಕ್ಕೂ 18 ವರ್ಷದ ತನಕ ನಿರಂತರ ಶಾಲೆಯಲ್ಲಿಯೇ ಇರಿ. ಕೆಲಸಕ್ಕೆ, ಜೀತಕ್ಕೆ, ಸಂಬಳಕ್ಕೆ ಸೇರಬೇಡಿ, ಹೋಗಬೇಡಿ.
- ✦ ನಿಮ್ಮ ಜೊತೆ, ನಿಮ್ಮ ಮನೆ ಹತ್ತಿರದ ಶಾಲೆ ಬಿಟ್ಟ **"ಒಂದು ಮಗು"**ವನ್ನು ಒಪ್ಪಿಸಿ, ಶಾಲೆಗೆ ಕರೆತನ್ನಿ.
- ✦ ಬಾಲಕಾರ್ಮಿಕ ಪದ್ಧತಿ, ಮಕ್ಕಳ ದುಡಿಮೆ ಮತ್ತು ಶೋಷಣೆಯನ್ನು ಖಂಡಿಸಿ, ವಿರೋಧಿಸಿ.

**ಗ್ರಾಮ ಪಂಚಾಯಿತಿ ಸದಸ್ಯರೇ ಹಾಗೂ ವಾರ್ಡ್ ಸದಸ್ಯರೇ....**

- ✦ ನಿಮ್ಮ ಪಂಚಾಯಿತಿ / ವಾರ್ಡ್ ವ್ಯಾಪ್ತಿಯಲ್ಲಿ 18 ವರ್ಷದತನಕ ಯಾವ ಮಗುವೂ ಶಾಲೆ ಬಿಡದಂತೆ ನೋಡಿಕೊಳ್ಳಿ. ಅವರಿಗೆ ಅವರ ಕುಟುಂಬಕ್ಕೆ ಸಹಾಯ ಮಾಡಿ. ನಿಜವಾದ ಬಡ ಕುಟುಂಬಕ್ಕೇ ಯೋಜನೆಗಳನ್ನು ನೀಡಿ.
- ✦ 18 ವರ್ಷದೊಳಗಿನ ಯಾವುದೇ ಮಗು ಕೆಲಸಕ್ಕೆ, ಜೀತ ಮತ್ತು ಸಂಬಳಕ್ಕೆ ಹೋಗದಂತೆ ನೋಡಿ ಬಾಲಕಾರ್ಮಿಕ ಮುಕ್ತ ಪಂಚಾಯಿತಿ / ವಾರ್ಡ್‌ನ್ನಾಗಿ ಮಾಡಿ.

**ಎಸ್‌ಡಿಎಂಸಿಯವರೇ...**

- ✦ ನಿಮ್ಮ ಶಾಲಾ ವ್ಯಾಪ್ತಿಯ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವಂತೆ ಮಾಡಿ **ಶೇಕಡಾ 100** ರಷ್ಟು ಹಾಜರಾತಿಯನ್ನು ಕಾಪಾಡಿ. **"ಮ್ಕಕಳ ಹಕ್ಕುಗಳ ಕ್ಲಬ್"** ರಚಿಸಿ **"ಮಕ್ಕಳ ಸ್ನೇಹಿ"** ಶಾಲೆಯನ್ನಾಗಿ ಮಾಡಿ.

**ಪೋಷಕರೇ ....**

- ✦ ಎಲ್ಲಾ ಮಕ್ಕಳಂತೆ ನಿಮ್ಮ ಮಕ್ಕಳು ಸ್ವಾಭಿಮಾನದಿಂದ ಶಾಲೆಯಲ್ಲಿ ಇರಲಿ ಶಾಲೆಗೆ ಸೇರಿಸಿ, ಇನ್ನೊಬ್ಬರಲ್ಲಿಗೆ ಕೆಲಸಕ್ಕೆ, ದುಡಿಮೆಗೆ, ಜೀತಕ್ಕೆ, ಸಂಬಳಕ್ಕೆ, ಗುಲಾಮತನಕ್ಕೆ ಕಳುಹಿಸಬೇಡಿ. ಅದು ಅಪರಾಧ. ನಿಮಗೂ ಶಿಕ್ಷೆ ಕಾದಿದೆ.

**ಮಾಲೀಕರೇ.....**

- ✦ ನಿಮ್ಮ ಮಕ್ಕಳಂತೆ ಎಲ್ಲಾ ಮಕ್ಕಳಿಗೆ ಶಿಕ್ಷಣ ಪಡೆಯುವ ಹಕ್ಕಿದೆ. ಅದಕ್ಕೆ ಪ್ರೋತ್ಸಾಹಿಸಿ. ಒಂದು ವೇಳೆ ದುಡಿತಕ್ಕೆ ಇಟ್ಟುಕೊಂಡಲ್ಲಿ ಒಂದು ವರ್ಷ ಜೈಲು ರೂ. 20,000 ದಂಡ. ಗ್ಯಾರಂಟಿ

**ಜನಪ್ರತಿನಿಧಿಗಳೇ...**

- ✦ ಮಕ್ಕಳು "VOTE BANK" ಅಲ್ಲವೆಂದು ನಿರ್ಲಕ್ಷಿಸಬೇಡಿ. ಅವರ ಶಿಕ್ಷಣಕ್ಕೆ ಪ್ರೋತ್ಸಾಹಿಸಿ, ಮಕ್ಕಳ ಪರವಾಗಿ ನಿಮ್ಮ ಭಾಷಣಗಳಲ್ಲಿ ಮಾತನಾಡಿ. ನಿಮ್ಮ ಪಕ್ಷದಲ್ಲಿ ಮುಖ್ಯ ವಿಷಯವನ್ನಾಗಿ ಮಾಡಿ.

**ಯುವಕರೇ / ಸಂಘದವರೇ / ಊರಿನ ಮುಖಂಡರೇ...**

- ✦ ನಿಮ್ಮ ಗ್ರಾಮದ ಯಾವುದೇ ಮಕ್ಕಳು ಶಿಕ್ಷಣದಿಂದ ವಂಚಿತರಾಗದಂತೆ ಜಾಗೃತಿ ಮೂಡಿಸಿ ಮತ್ತು ಯಾವುದೇ ಬೀದಿ ಮಕ್ಕಳು, ಚಿಂದಿ ಆಯುವ, ದುಡಿಯುವ, ಶಾಲೆ ಬಿಟ್ಟ ಮಕ್ಕಳು ಕಂಡು ಬಂದಲ್ಲಿ ಶಾಲೆಗೆ ಸೇರಿಸಿ ಹತ್ತಿರದ ಯಾವುದೇ ಇಲಾಖೆಗೆ (ಕಾರ್ಮಿಕ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) ತಿಳಿಸಿ. ನಿಮ್ಮ ಗ್ರಾಮವನ್ನು **"ಮಕ್ಕಳ ಸ್ನೇಹಿ"** ಹಾಗೂ **"ಬಾಲಕಾರ್ಮಿಕ ಮುಕ್ತ"** ಗ್ರಾಮವನ್ನಾಗಿ ಮಾಡಿ.

**ಮಹಿಳೆಯರೇ, ಸ್ವ-ಸಹಾಯ ಸಂಘದವರೇ ಮತ್ತು ಮಹಿಳಾ ಸಂಘದವರೇ...**

- ✦ ತಮ್ಮ ಮನೆಯಲ್ಲಿ ಎಲ್ಲಾ ಮಕ್ಕಳು ಶಾಲೆಗೆ ಹೋಗುವಂತೆ ಮಾಡಿ.
- ✦ ನಿಮ್ಮ ಸಂಘವನ್ನು **"ಬಾಲಕಾರ್ಮಿಕ ಮುಕ್ತ ಮಹಿಳಾ ಸಂಘ"**ಗಳನ್ನಾಗಿ ಮಾಡಿ.
- ✦ ನೀವು ಯಾವುದೇ ಮಗುವನ್ನು ಕೆಲಸಕ್ಕೆ ಕಳುಹಿಸಬೇಡಿ / ಕೆಲಸಕ್ಕೆ ಇಟ್ಟುಕೊಳ್ಳಬೇಡಿ.
- ✦ ನಿಮ್ಮ ಸಂಘದಲ್ಲಿ ಯಾವುದೇ ಸದಸ್ಯರು ಮಕ್ಕಳನ್ನು ಶಾಲೆ ಕಳುಹಿಸದಿದ್ದರೆ ಅವರ ಸದಸ್ಯತ್ವವನ್ನು ರದ್ದು ಮಾಡಿ.

**ಸಾರ್ವಜನಿಕರೇ...**

- ✦ ಯಾವುದೇ ಮಕ್ಕಳನ್ನು ದುಡಿಮೆಗೆ ಇಟ್ಟುಕೊಳ್ಳಬೇಡಿ ದುಡಿಮೆಗೆ ಕಳುಹಿಸಬೇಡಿ.
- ✦ ಬಾಲಕಾರ್ಮಿಕ ಪದ್ಧತಿಯನ್ನು ವಿರೋಧಿಸಿ, ಖಂಡಿಸಿ, ಪ್ರಶ್ನಿಸಿ.
- ✦ ಮಕ್ಕಳ ದುಡಿಮೆ, ಬಾಲಕಾರ್ಮಿಕರು ಕಂಡಲ್ಲಿ ಶಿಕ್ಷಣ ಇಲಾಖೆಗೆ / ಕಾರ್ಮಿಕ ಇಲಾಖೆಗೆ ದೂರು ಕೊಡಿ.
- ✦ ಮಕ್ಕಳ ಹಕ್ಕುಗಳ ಬಗ್ಗೆ ಪ್ರಚಾರ ಮಾಡಿ

**ನಾಗರಿಕ ಸಂಘ ಸಂಸ್ಥೆಗಳೇ...**

- ✦ ನಿಮ್ಮ ಸಂಸ್ಥೆಯ ಮುಖ್ಯ ಉದ್ದೇಶ ಗುರಿಗಳಲ್ಲಿ **"ಮಕ್ಕಳ ಹಕ್ಕು"** ಒಂದಾಗಿರಲಿ, ಅದು ನಿರಂತರ ಇರಲಿ.
- ✦ ನಿಮ್ಮ ಸಂಸ್ಥೆ ಬಾಲಕಾರ್ಮಿಕ ಪದ್ಧತಿ ವಿರುದ್ಧ ಕಾರ್ಯ ನಿರ್ವಹಿಸಲಿ ಆ ಕುರಿತು ಸಂಸ್ಥೆಯಲ್ಲಿ ಬೋರ್ಡ್ ಹಾಕಿ.
- ✦ ಮಕ್ಕಳ ಕೇಂದ್ರೀಕೃತವಾದ ಚಟುವಟಿಕೆಗಳನ್ನು ಹಮ್ಮಿಕೊಳ್ಳಿ ಅಥವಾ ಇತರ ಯಾವುದೇ ಚಟುವಟಿಕೆ ಇದ್ದರೂ **"ಮಕ್ಕಳ ಸಂರಕ್ಷಣೆ"**ಯ ವಿಷಯ ಅದರಲ್ಲಿ ಇರಲಿ.



# ಮಕ್ಕಳು ಬೇರೆ ಬೇರೆ ಕ್ಷೇತ್ರದಲ್ಲಿ ಕೆಲಸ ಮಾಡುವುದರಿಂದ ಬರುವ ರೋಗಗಳು....
# ಸಾರ್ವಜನಿಕರೇ ಎಚ್ಚರ... !!!

| ಕೆಲಸ / ವೃತ್ತಿ | | ಬರುವ ರೋಗಗಳು |
|---|---|---|
| 1. ಹತ್ತಿ ಬೀಜ ಕ್ರಾಸಿಂಗ್ (ಸೀಡ್ ಕ್ರಾಸಿಂಗ್) | : | ಕಣ್ಣುಬೇನೆ, ಅಸ್ತಮಾ, ಗರ್ಭಕೋಶ ಕಾಯಿಲೆ, ಶ್ವಾಸಕೋಶ ಕಾಯಿಲೆ, ಚರ್ಮ ರೋಗ. |
| 2. ಹೊಗೆಸೊಪ್ಪು ಬಿಡಿಸುವುದು, ಒಣಗಿಸುವುದು | : | ಕಣ್ಣುಬೇನೆ, ಅಸ್ತಮಾ, ಗರ್ಭಕೋಶ ಕಾಯಿಲೆ, ಶ್ವಾಸಕೋಶ ಕಾಯಿಲೆ, ಚರ್ಮ ರೋಗ. |
| 3. ಗ್ಯಾರೇಜ್ | : | ಕಣ್ಣುಬೇನೆ, ಚರ್ಮರೋಗ, ಅಪಘಾತಗಳು, ಕುರುಡುತನ, ಶ್ವಾಸಕೋಶ ಸಂಬಂಧಿತ ಕಾಯಿಲೆಗಳು. |
| 4. ಇಟ್ಟಿಗೆ ಭಟ್ಟಿ | : | ಅಸ್ತಮಾ, ಶ್ವಾಸಕೋಶ ಸಂಬಂಧಿತ ರೋಗ, ಕಜ್ಜಿ, ಚರ್ಮ ರೋಗ, ಗಂಟಲು ರೋಗ, ಅಪಘಾತ |
| 5. ಹೋಟೆಲ್ | : | ಅಪಘಾತ, ಚರ್ಮರೋಗ, ಲೈಂಗಿಕ ದುಶ್ಚಟ, ಕಾಲುಬೇನೆ, ಶ್ವಾಸಕೋಶ ಸಂಬಂಧಿತ ರೋಗಗಳು. |
| 6. ಮನೆ ಕೆಲಸ | : | ದೌರ್ಜನ್ಯ, ಮಾನಸಿಕ ತೊಂದರೆ, ಚರ್ಮರೋಗಗಳು, ಲೈಂಗಿಕ ಹಿಂಸೆ, ದೈಹಿಕ ಹಲ್ಲೆ ಇತ್ಯಾದಿ. |
| 7. ಬಾರ್ ರೆಸ್ಟೋರೆಂಟ್ | : | ದೌರ್ಜನ್ಯ, ಮಾನಸಿಕ ಕಾಯಿಲೆ, ದುಶ್ಚಟಗಳಿಗೆ ಬಲಿ, ಚರ್ಮರೋಗ. |
| 8. ಮಂಡಕ್ಕಿ ಭಟ್ಟಿ | : | ಅಸ್ತಮಾ, ಶ್ವಾಸಕೋಶ ಸಂಬಂಧಿತ ರೋಗ, ಗಂಟಲು ರೋಗ, ಕಣ್ಣು ಬೇನೆ, ಚರ್ಮವ್ಯಾಧಿ, ಅಪಘಾತ. |
| 9. ಕೃಷಿ, ವ್ಯವಸಾಯ | : | ಕೀಟನಾಶಕಗಳು ಮತ್ತು ಫಾರ್ಮ್ ಯಂತ್ರಗಳಿಂದ ಹಾನಿಗಳು, ಜ್ವರ, ಇತರೇ ಸಾಂಕ್ರಾಮಿಕ ರೋಗಗಳು. |
| 10. ಬೀಡಿ ಉದ್ದಿಮೆ | : | ಕ್ಷಯ, ಶ್ವಾಸಕೋಶ ಸಂಬಂಧಿತ ರೋಗಗಳು, ಗಂಟಲು ರೋಗ. |
| 11. ಗಾಜು ಉದ್ದಿಮೆ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗಗಳು, ಕಣ್ಣಿನ ರೋಗಗಳು, ಉರಿತ, ಕಣ್ಣುಬೇನೆ, ಸುಟ್ಟಗಾಯಗಳು. |
| 12. ಕೈಮಗ್ಗ ಮತ್ತು ರತ್ನಗಂಬಳಿ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗಗಳು, ಬೆನ್ನು ಮೂಳೆ ರೋಗ. |
| 13. ಜರಿ ಮತ್ತು ಕಸೂತಿ | : | ಕಣ್ಣುಬೇನೆ, ಕಣ್ಣಿನ ಎಲ್ಲಾ ಕಾಯಿಲೆಗಳು |
| 14. ವಜ್ರ ಮತ್ತು ಹರಳು ತಿದ್ದುವುದು | : | ಕಣ್ಣಿನ ತೊಂದರೆಗಳು, ಗಾಯಗಳು |
| 15. ಕಟ್ಟಡ ನಿರ್ಮಾಣ | : | ಅಪಘಾತಗಳು, ಬೆಳವಣಿಗೆಗೆ ಅಡ್ಡಿ. |
| 16. ಚಿಂದಿ ಆಯುವುದು | : | ಚರ್ಮವ್ಯಾಧಿಗಳು, ಸಾಂಕ್ರಾಮಿಕ ರೋಗಗಳು, ಧನುರ್ವಾಯು ಹಾಗೂ ಕೆಟ್ಟ ಚಟಗಳು. |
| 17. ಕುಂಬಾರಿಕೆ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗಗಳು. |
| 18. ಗಣಿಗಳು, ಕಲ್ಲು ಸ್ಲೇಟು ಗಣಿಗಳು | : | ಸಿಲಿಕೋಸಿಸ್ (ಶ್ವಾಸಕೋಶದ ಎಲ್ಲಾ ಕಾಯಿಲೆ), ಕುಂಠಿತ ಬೆಳವಣಿಗೆ, ಕಣ್ಣು ಬೇನೆ, ನಡುನೋವು, ಬೆನ್ನುಹುರಿ ಕಾಯಿಲೆ. |
| 19. ಲೈಂಗಿಕ ಚಟುವಟಿಕೆಗಳು | : | ಲೈಂಗಿಕ ರೋಗಗಳು, ಏಡ್ಸ್ |
| 20. ರೇಷ್ಮೆ ಹುರಿ | : | ಅಸ್ತಮಾ, ಕ್ಷಯ, ಶ್ವಾಸಕೋಶದ ರೋಗ, ಗರ್ಭಕೋಶದ ಕುಂಠಿತ ಬೆಳವಣಿಗೆ. |

**ಈ ರೀತಿ ಲಕ್ಷಾಂತರ ಕ್ಷೇತ್ರಗಳಲ್ಲಿ ಕೋಟಿಗಟ್ಟಲೆ ಮಕ್ಕಳು ದುಡಿಯುತ್ತಾ ಬೇರೆ ಬೇರೆ ರೋಗಗಳಿಗೆ ಬಲಿಯಾಗುತ್ತಿದ್ದಾರೆ.**
**14 ವರ್ಷದೊಳಗಿನ ಮಕ್ಕಳನ್ನು ದುಡಿಸಿದರೆ ರೂ. 20,000/- ದಂಡ ಮತ್ತು 1 ವರ್ಷ ಜೈಲು.**

ಸರ್ವ ಶಿಕ್ಷಣ ಅಭಿಯಾನ
ಎಲ್ಲರೂ ಕಲಿಯೋಣ, ಎಲ್ಲರೂ ಬೆಳೆಯೋಣ
unicef

ಪ್ರಕಟಣೆ : ಜಿಲ್ಲಾಡಳಿತ (✆ 229011), ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ (✆ 235100), ಕಾರ್ಮಿಕ ಇಲಾಖೆ (✆ 226368), ರಾಷ್ಟ್ರೀಯ ಬಾಲಕಾರ್ಮಿಕ ಯೋಜನಾ ಸಂಘ (✆ 227581), ಸಾರ್ವಜನಿಕ ಶಿಕ್ಷಣ ಇಲಾಖೆ, ರಾಯಚೂರು ಹಾಗೂ ಯುನಿಸೆಫ್ "ಮಕ್ಕಳ ಸಂರಕ್ಷಣಾ" ಯೋಜನೆ, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು. (✆ 230610)